ಅ) ಇಲ್ಲ

ಆ) ಇಲ್ಲ

ಇ) 'ಅ' ನಲ್ಲಿ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹುಬ್ಬಳ್ಳಿ - ಧಾರವಾಡ ಮಹಾನಗರ ಸಭೆಯ ವ್ಯಾಪ್ತಿಯಲ್ಲಿ ಬಡಜನರಿಗೆ ಆಶ್ರಯ ಯೋಜನೆಯಲ್ಲಿ ನಿವೇಶನ

314 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ವ್ಯಾಪ್ತಿಯಲ್ಲಿ ಬರುವ ನೀವೇಶನ ರಹಿತ ಬಡಜನರಿಗೆ ನಿವೇಶನ ಒದಗಿಸಲು 1989 ರಿಂದ 1994ರ ವರೆಗೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ? (ವಿವರ ನೀಡುವುದು)*

ಆ) *ಪ್ರತಿ ಸಾಲಿಗೆ ಗುರುತಿಸಲಾದ ಫಲಾನುಭವಿಗಳ ಸಂಖ್ಯೆ ಎಷ್ಟು?*

ಇ) *ಹಾಗೂ ಮಂಜೂರು ಮಾಡಿದ ನಿವೇಶನಗಳ ಸಂಖ್ಯೆ ಎಷ್ಟು? ಮಂಜೂರು ಮಾಡಬೇಕಾಗಿರುವ ಸಂಖ್ಯೆ ಎಷ್ಟು?*

ಈ) *ನಿವೇಶನ ರಹಿತ ಬಡಜನರಿಂದ ಪ್ರತಿಯೊಂದು ನಿವೇಶನಕ್ಕೆ ರೂ. 750-00 ರಂತೆ ಹಣ ತುಂಬಿಸಿ ಕೊಂಡಿರುವುದು ನಿಜವೇ? ಈ ರೀತಿ ಎಷ್ಟು ಜನರಿಂದ ಎಷ್ಟು ಹಣ ಪಡೆಯಲಾಗಿದೆ?*

ಉ) *ನಿವೇಶನ ರಹಿತ ಫಲಾನುಭವಿಗಳ ಸಂಖ್ಯೆ ಎಷ್ಟು? ಇವರಿಗೆ ನಿವೇಶನ ಒದಗಿಸಲು ಸರ್ಕಾರ ಮಾಡಿರುವ ಯೋಜನೆ ಹಾಗೂ ಕಾರ್ಯಕ್ರಮಗಳೇನು ಮತ್ತು ಯಾವಾಗ ನಿವೇಶನಗಳನ್ನು ಒದಗಿಸಲಾಗುವುದು?*

ಶ್ರೀ ಗೋಪಿನಾಥ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆ ವ್ಯಾಪ್ತಿಯಲ್ಲಿರುವ ಮೂರು ವಿಧಾನಸಭೆ ಕ್ಷೇತ್ರ ಟಾಸ್ಕ್ ಫೋರ್ಸ್ ಸಮಿತಿಯು ಸನ್ 1989 ರಿಂದ 1994ರ ವರೆಗೆ ಒಟ್ಟು 6495 ಫಲಾನುಭವಿಗಳನ್ನು ಗುರುತಿಸಲಾಗಿದೆ.

ಆ)

ಸನ್	1991-92	-	ಇಲ್ಲ
	1992-93	-	3600
	1993-94	-	ಇಲ್ಲ
	1994-95	-	2895

ಇ) ಈ ವರೆಗೆ ಒಟ್ಟು 1423 ಫಲಾನುಭವಿಗಳಿಗೆ ನಿವೇಶನಗಳನ್ನು ಮಂಜೂರು ಮಾಡಲಾಗಿದೆ. ನಿವೇಶನ ಮಂಜೂರು ಮಾಡಬೇಕಾದ ಫಲಾನುಭವಿಗಳ ಸಂಖ್ಯೆ 5072.

ಈ) ಹೌದು, ಒಟ್ಟು 3857 ಜನರಿಂದ ಪ್ರತಿಯೊಬ್ಬನು 750-00 ರಂತೆ ಒಟ್ಟು ರೂ. 28,92,750-00 ಪಡೆಯಲಾಗಿದೆ ಹಾಗೂ ಫೆಬ್ರವರಿ 94 ರಿಂದ ಈ ರೀತಿ ವಸೂಲಿ ಮಾಡುವುದು ನಿಲ್ಲಿಸಲಾಗಿದೆ.

ಉ) ಒಟ್ಟು 6495 ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 1423 ಫಲಾನುಭವಿಗಳಿಗೆ ನಿವೇಶನ ವಿತರಿಸಲಾಗಿದೆ. ಉಳಿದ 5072 ಫಲಾನುಭವಿಗಳಿಗೆ ನಿವೇಶನ ಹಂಚಿಕೆಗಾಗಿ ಜಮೀನುಗಳನ್ನು ಗುರುತಿಸುವ ಕ್ರಮ ಕೈಕೊಳ್ಳಲಾಗುತ್ತಿದೆ.